ದಿಃ 12-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀ ಎ ಎಫ್ ಕೆ ಕೀಲರಿಂದ.

ಈ ದಾವೆಯಲ್ಲಿ ನಾನು 1 ನೇ ವಾದಿಯಾಗಿದ್ದು, ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೆನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ**

1) ಒಂದು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿಪಿ 1 ಎಂದು,**

2) ಎರಡು ತೆರಿಗೆ ಪಾವತಿ ರಸೀದಿಯನ್ನು ಹಾಜರುಪಡಿಸಿದ್ದು ಅವುಗಳನು ಕ್ರಮವಾಗಿ **ನಿಪಿ 2 ಮತ್ತು 3 ಎಂದು,**

3) ಎರಡು ಆಧಾರ ಕಾರ್ಡಗಳ ನೋಟರೈಸಡ್ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿಪಿ 4 ಮತ್ತು 5 ಎಂದು,**

4) ಎರಡು ಪ್ರತಿಜ್ಞಾ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿಪಿ 6 ಮತ್ತು 7 ಎಂದು** ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**ಪಾಟೀ ಸವಾಲುಃ** ಪ್ರತಿವಾದಿ ಏಕತರಪಿ ಆಗಿದ್ದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.